ಈ ಪ್ರೀತಿ ಗೀತಿ ಅಂತ ದುರ್ಗಳ ಬಾಯಿಂದ ಮೊದಲಸಲ ಕೇಳಾಕತ್ತ್ಯಾಳ ಪದ್ಮ.

ಹಂಗೇ ಮೂರ್ನಾಲ್ಕು ದಿವಸ ಹೋದಮ್ಯಾಗ... ಮತ್ತ ನಾಲ್ಕೈದು ಮಿರ್ಚಿ ವಗ್ಗಾಣಿ ಪೂಡ ಖಾಲಿಯಾದ ಮ್ಯಾಗ. ಪದ್ಮ ಒಪ್ಪಿಗೆಂಡ್ಲು.

"ನೀನೇನೂ ಅಂಜಿಕ ಬ್ಯಾಡ. ನಾನು ಅಲ್ಲೇ ಗಿಡದ ಮರಿಯಾಗ ಇರ್ತೀನಿ. ಅವನೇನಾದ್ರೂ ಹೆಚ್ಚು ಕಡಿಮೆ ಮಾಡಿದ್ರೆ ನಾನು ಸುಮ್ನಿರ್ತಿನೇನು? ನೀವು ಸುಮ್ನೆ ಕೊಕಾಕೋಲ ಕುಡ್ದು ಸ್ವಲ್ಪ್ ಹೊತ್ತು ಮಾತಾಡಿಕ್ಯಾರಿ" ಅಂದಿದ್ಲು ದುರ್ಗ.

ಮರುದಿನ ಪದ್ಮ, ರಾಂಬಾಬು ಅದೇ ಜಾಗದಾಗ ಭೆಟ್ಟಿಯಾದ್ರು. ಅದೇ ಹೊಲ. ಅದೇ ಹೊಲದಂಚಿನ ದಿಬ್ಬ. ಅವ್ನು ಏನೂ ಮಾಡ್ಲಿಲ್ಲ. ಪದ್ಮ ಕೊಕಾಕೋಲ ಕುಡುದ್ಲು. ಆಕಿಗೆ ಏನೂ ಆಗ್ಲಿಲ್ಲ. ಹಂಗೇ ಒಂದೆರಡು ಸಲ ಅದೇ ಜಾಗದಾಗ ಭೆಟ್ಟಿಯಾದ್ರು. ಮೂರನೇ ಸಲ ಕತ್ತಲಾಗತಿದ್ದಂಗ ಮನೆಗೆ ಹೋಗ್ತೀನಂತ ಎದ್ದು ನಿಂತ್ಲು ಪದ್ಮ. ಅಲ್ಲೆಲ್ಲೋ ಮರೆಯಾಗ ಇರ್ತೀನಿ ಅಂತ ಹೇಳಿದ್ದ ದುರ್ಗ ಯಾವಗಲೋ ಹೋಗಿಬಿಟ್ಟಿದ್ಲು.

ಎದ್ದುನಿಂತುಗಂಡಿದ್ದ ಪದ್ಮಳ ಕೈ ಹಿಡಿದು ನಿಲ್ಲಿಸಿಗೆಂಡ ರಾಂಬಾಬು.

"ಈ ಬಾಟ್ಲನ್ಯಾಗ ಇನ್ನಾ ಸ್ವಲ್ಪ ಉಳದಾದ. ಅರ್ಧ ನೀನ್ ಕುಡಿ. ಅರ್ಧ ನಾನ್ ಕುಡಿತೀನಿ."

ಆಕಿ ಮೊದಲು ಅರ್ಧ ಕುಡುದ್ಲು. ಆಮ್ಯಾಗ ಏನಾಯ್ತೋ ಗೊತ್ತಿಲ್ಲ. ಎಷ್ಟೋ ಹೊತ್ತಾದ ಮ್ಯಾಲ ಎಚ್ಚರಕಿ ಆಯ್ತು. ಏನ್ ಆಗ್ಯಾದಂತ ಅರ್ಥ ಆಗಾಕ ಭಾಳ ಹೊತ್ತು ಹಿಡೀಲಿಲ್ಲ.

ಮರುದಿನ ಕಾಲೇಜಿಗೆ ಹೋದ ಪದ್ಮ ಮತ್ತೆ ಊರಿಗೆ ಬರಲಿಲ್ಲ. ಭಾಳ ದಿನಗಾಳಾದ ಮ್ಯಾಲೆ ಅವರಮ್ಮನ ಹೆಸರಿನ್ಯಾಗ ರೊಕ್ಕಾ ಬರಾಕ ಶುರುವಾತು. ಮಗಳು ಮಾಡ್ತಿರಾ ಕೆಲ್ಸದ ಮ್ಯಾಗ ಅವರಮ್ಮನಿಗೆ ನಂಬಿಕೆ ಇರಲಿಲ್ಲ. ಅವರಪ್ಪನಿಗೆ ನಂಬಿಕಿ ಇತ್ತೋ ಇಲ್ಲೋ ಗೊತ್ತಿಲ್ಲ. ಆತ ಸಾಲ್ಯಾಗ ಮಾತಾಡಾದು ನಿಲ್ಸಿ ಭಾಳ ದಿನ ಆಗಿತ್ತು. ಊರಿನೋರು ಮಗಳ ಸುದ್ದಿ ಕೇಳಾದು ಬುಟ್ಟುಬುಟ್ಟಿದ್ರು. ಖರೇ ಏನಾಗೇತಿ ಅಂತ ಯಾರಿಗೂ ಗೊತ್ತಿರಲಿಲ್ಲ.

ತನ್ನ ವಯಸ್ಸಿನಾಗಿರೋ ಚಂದದ ಹುಡಿಗೇರಿಗೆ ಮಾಮೂಲಿ ಕೆಲ್ಸಗಳು ಸಿಗಂಗಿಲ್ಲಂತ, ಊರುಬಿಟ್ಟ ಎರಡನೇ ದಿನಾನೇ ಗೊತ್ತಾಗಿತ್ತು ಪದ್ಮಳಿಗೆ. ಆಂಧ್ರದಾಗಿನ ವಿಶಾಖಪಟ್ಟಣಂ, ಅಮಲಾಪುರಂ, ಗುಂಟೂರು, ವಿಜಯವಾಡಗಳೆಲ್ಲಾ ತಿರಿಕ್ಕೆಂತ ಮೂರ್ನಾಲ್ಕು ವರ್ಷ ಕಳೆದಿದ್ಲು. ಅಲ್ಲಿಂದ ಗೋವಾಕ್ಕ ಬಂದು ಎರಡು ವರ್ಷ ಆಗಿತ್ತು. ಈ ನಡುವ ಗೋವಾದಾಗ ಕೂಡ ಭಾಳ ಸ್ಟ್ರಿಕ್ಟ್ ಆಗಿ ಬದುಕಾದೇ ಕಷ್ಟಾಗಿ ಹೋಗಿತ್ತು. ಹಿಂಗಾ ಯಾವುದೋ ಲಿಂಕು ಇಟಗಂಡು ರಾಯಚೂರಿನ ಬೇಬಿ ಹತ್ರ ಬಂದು ಮೂರು ತಿಂಗಳಾತು. ಬೇಬಿ ತನ್ನನ್ನ ಛೊಲೋನೇ ನೋಡಿಕೇಳ್ಳಾಕತ್ತ್ಯಾಳ.

ಹಂಗ ನೋಡಿದ್ರೆ ರಾಯಚೂರಿಲಿಂದ ತುರುಕಟ್ಟಿ ಭಾಳ ದೂರೇನೂ ಇಲ್ಲ. ಅಪ್ಪಅಮ್ಮನ್ನ ನೋಡ್ಬೇಕಂತ ಮನಸು ಎಳ್ಯಾಕತ್ತಿತ್ತು. ಯಾರಿಗೂ ಕಾಣಲಾರದಂಗ ಒಂದ್ಸಲ ಹೋಗಿ ಬರಾಣ ಅಂತ ಅನ್ನಾಕ ಹತ್ತಿತ್ತು ಪದ್ಮಳಿಗೆ. ಮತ್ಯಾಕೋ ಬ್ಯಾಡ ಅನ್ನುಸ್ತು. ದುರ್ಗ ಯಾಕ್ ಮೋಸ ಮಾಡಿದ್ಲು ಅಂತ ಕೇಳಬೇಕಂತ ಮೊದಮೊದ್ಲು ಅನ್ನಿಸ್ತಿತ್ತು. ದಿನ ಕಳದಂಗೆಲ್ಲ ಏನು ಫಾಯ್ದಾ ಅನ್ಕಂಡು ಸುಮ್ನಾದಳು.

ಪದ್ಮಳನ್ನ ಬಂದೋರಿಗೆಲ್ಲ ತೋರಿಸ್ತಿರಲಿಲ್ಲ ಬೇಬಿ. ಸ್ಪೆಷಲ್ ಕಸ್ಟಮರುಗಳಿಗೆ ಮಾತ್ರ ತೋರಿಸ್ತಿದ್ಲು. ಬಂದ ಸ್ವಲ್ಪ ದಿನಗಳಲ್ಲೇ ರಾಯಚೂರಿನ ಬಡಾ ಸಿರಿವಂತರ ಸರ್ಕಲ್‌ನ್ಯಾಗ ಮಶೂರ್ ಆಗಿಬಿಟ್ಟಿದ್ಲು ಪದ್ಮ.

ಒಂದು ಸಲ ರಾತ್ರಿ ಏಳು ಗಂಟೆ ಸುಮಾರಿಗೆ ಬೇಬಿ ಕರೆಸಿದ್ಲು. ಆಕೀ ಬಗಲಾಗಿನ ಕುರ್ಚ್ಯಾಗ ಒಬ್ಬಾತ ಕುಂತಿದ್ದ. ಕಾಲು ಮ್ಯಾಗ ಕಾಲು ಹಾಕ್ಯಂಡು ಗೊಂಬಿ ಕುಂತಂಗ ಕುಂತಗಂಡಿದ್ದ ಆತ. ಖರೇ ಹೇಳಬೇಕಂದ್ರ ಕಸ್ಟಮರುಗಳ ಮುಖಗಳನ್ನು ನೋಡಾದು ಯಾವತ್ತೋ ಬಿಟ್ಟುಬಿಟ್ಟಿದ್ಲು ಪದ್ಮ. ಅಲ್ಲಿಗೆ